ಓ ಎಸ್ **361/2019**

ಡಿ ಡಬ್ಲ್ಯೂ -1

**ದಿಃ 03.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಸಿ ಎಸ್ ಆರ್ ವಕೀಲರಿಂದ ಃ**

ನಾನು ಮುತ್ತಯ್ಯನಪಾಳ್ಯದಲ್ಲಿ ವಾಸವಿರುತ್ತೇನೆ. ನನ್ನ ತಂದೆ ಅಮೀರ್ ಖಾನ್ ರವರ ತಂದೆಯ ಹೆಸರು ಅಸನ್ ಖಾನ್ . ದಾವಾ ಐಟಂ ನಂಬರ್ 1 ನ್ನು ವಾದಿಗಳ ತಂದೆ ಇಬ್ರಾಹಿಂ ಸಾಬ್ ರವರು ಪಾಚಾಬಿ ಮತ್ತು ಗೌಸ್ ಖಾನ್ ರವರಿಂದ 1970 ರಲ್ಲಿ ಕ್ರಯಕ್ಕೆ ಪಡೆದಿರುವ ಸ್ವತ್ತಾಗಿರುತ್ತದೆ ಎಂದರೆ ಸಾಕ್ಷಿ ನಾವೆಲ್ಲ ಒಟ್ಟಾಗಿದ್ದಾಗ ನಮ್ಮ ತಂದೆಯವರು ಮತ್ತು ಅವರು ಒಟ್ಟಾಗಿ ಸದರಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. 1961 ರಲ್ಲಿ ಸುನ್ನಾ ಸಾಬ್ ರವರಿಂದ ವಾದಿಗಳ ತಂದೆ ದಾವಾ ಐಟಂ ನಂಬರ್ 2 ಮತ್ತು 3 ನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆಯವರು ಮತ್ತು ಅವರು ಸೇರಿ ಕ್ರಯಕ್ಕೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಿ ಪಿ2 ರಂತೆ ಇರುವ ಪಹಣಿಯಲ್ಲಿ ಇಬ್ರಾಹಿಂ ಸಾಬ್ ರವರ ಹೆಸರು ನಮುದಾಗಿರುತ್ತದೆ ಎಂದರೆ ಸಾಕ್ಷಿ ನಮ್ಮ ತಂದೆಯವರು ಎಲ್ಲರು ಸೇರಿ ನಮ್ಮ ದೊಡ್ಡಪ್ಪನ ಹೆಸರಿಗೆ ಸದರಿ ಸ್ವತ್ತನ್ನು ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸ.ನಂ. 170/2 ರಲ್ಲಿ ನನ್ನ ತಾಯಿಗೆ 28 ಗುಂಟೆ ಜಮೀನು ಹೇಗೆ ಬಂದಿರುತ್ತೆ ಎಂದರೆ ಸಾಕ್ಷಿ ಭಾಗದಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಹೇಗೆ ಭಾಗ ಮಾಡಲಾಗಿರುತ್ತದೆ ಎಂದು ಕೇಳಿದರೆ ನಾವು ಒಟ್ಟು ಕುಟುಂಬದಲ್ಲಿದ್ದಾಗ ಭಾಗ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಭಾಗ ಮಾಡಬೇಕಾದರೆ ಇಬ್ರಾಹಿಂ ಸಾಬ್ ರವರು ತೀರಿಕೊಂಡಿದ್ದರು. ಇಬ್ರಾಹಿಂ ಸಾಬ್ ರವರಿಂದ ಸದರಿ ಸ್ವತ್ತನ್ನು ಪಡೆದಿಲ್ಲ ಎಂದರೆ ಸುಳ್ಳು . ಭಾಗ ಆಗಬೇಕಾದರೆ ಇಬ್ರಾಹಿಂ ಸಾಬ್ ರವರ ಮಕ್ಕಳಿಂದ ಸಹಿ ಪಡೆದಿರುತ್ತೇವೆ. ಸದರಿ ಪತ್ರದ ಜೆರಾಕ್ಸ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ನೀಡಿದ್ದು, ಅದರ ಅಸಲಿ ಪ್ರತಿ ಇಬ್ರಾಹಿಂ ಸಾಬ್ ರವರ ಮಕ್ಕಳ ಹತ್ತಿರ ಇರುತ್ತದೆ.

ನಾನು ಸಲ್ಲಿಸಿರುವ ನಿ ಡಿ 2 ರಲ್ಲಿ ಯಾವುದೇ ಋಣಭಾರ ಆಗಿರುವುದಿಲ್ಲ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿ ಡಿ 8 ರಂತೆ ನನಗೆ ವಿಭಾಗಪತ್ರದಂತೆ ಎಂ ಆರ್ ಆಗಿರುವುದಾಗಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಸದರಿ ನಿ ಡಿ 8 ರಲ್ಲಿ ಸ.ನಂ. 170/2 ರಲ್ಲಿ 1 ಎಕರೆ 3 ಗುಂಟೆ ನಿಸಾರ್ ಅಹಮ್ಮದ್ ರವರ ಕುಟುಂಬಕ್ಕೆ ಸೇರಿದ್ದು

ಎಂದು ಬರೆಯಿಸಿರುತ್ತೇವೆ ಎಂದರೆ ಸರಿ. ಅದೇ ಸ.ನಂ. 170/2ರಲ್ಲಿ 30 ಗುಂಟೆ ನಮ್ಮ ತಾಯಿಯ ಹೆಸರಿಗೆ ಬರೆಯಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ಇಬ್ರಾಹಿಂ ಖಾನ್ ರವರಿಗೆ 37 ಗುಂಟೆ ಬರೆಯಿಸಿರುತ್ತೇವೆ ಎಂದರೆ ಸರಿ. ನಾನು ಹಾಕಿರುವ ಎಂ ಆರ್ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸುಳ್ಳು. ನಿ ಡಿ 9 ಕ್ರಯಪತ್ರಕ್ಕೂ ಈ ದಾವೆಗೂ ಸಂಬಂದ ಇರುವುದಿಲ್ಲ ಎಂದರೆ ಸುಳ್ಳು.

ಸ.ನಂ. 170/2 ರಲ್ಲಿ ಇರುವ 28 ಗುಂಟೆಯಲ್ಲಿ ನನ್ನ ತಾಯಿಗೆ ಬಂದಂತಹ ಸ್ವತ್ತಿಗೆ ನಾನು ಪೋಡ್ ಮಾಡಿಸಿಕೊಂಡಿರುವುದಿಲ್ಲ. ಸ.ನಂ. 169/3 ಬಿ ಮತ್ತು 169/3 ಇ ನಲ್ಲೂ ಪೋಡ್ ಮಾಡಿಸಿಕೊಂಡಿಲ್ಲ ಎಂದರೆ ಮಾಡಿಸಿಕೊಂಡಿರುತ್ತೇನೆ. ನಾನು ದಾವಾ ಸ್ವತ್ತುಗಳ ಅನುಭವದಲ್ಲಿ ಇರುವುದಿಲ್ಲ ಎಂದರೆ ಸುಳ್ಳು. ನಾನು ದಾವಾ ಸ್ವತ್ತಿನ ಅನುಭವದಲ್ಲಿ ಇಲ್ಲದೇ ಇದ್ದರೂ ಇರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**